**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚಿಕ್ಕೋಡಿ**

PCR No.:-72/2026

C.W.:-1

| | |
|---|---|
| ಸಾಕ್ಷಿದಾರನ ಹೆಸರು | ಕೋಮಲ್ ಸಾವಂತ |
| ಗಂಡನ ಹೆಸರು | ಸಚೀನ್ |
| ವಯಸ್ಸು | 27 ವರ್ಷ |
| ಕೆಲಸ | ಮನೆಗೆಲಸ |
| ವಾಸ | ಯಕ್ಸಂಬಾ |

ಸಾಕ್ಷಿಗೆ ಈ ದಿನ ದಿಃ 29-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು

ಸಾಕ್ಷಿಗೆ ಹಿಂದಿ ಭಾಷೆ ಬಿಟ್ಟು ಬೇರೆ ಭಾಷೆ ಬರದ ಕಾರಣ ಶ್ರೀ ಎಂ ಜಿ ಎಂ ವಕೀಲರನ್ನು ಭಾಷಾ ತರ್ಜುಮೆದಾರರನ್ನಾಗಿ ನೇಮಕ ಮಾಡಿಕೊಂಡು ಅವರಿಗೂ ಸಹ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಫಿರ್ಯಾದಿ ಸ್ವತಃ ಹೇಳಿಕೆ**

1) ಎಪ್ರಿಲ್ 2020 ರಲ್ಲಿ ನನ್ನ ಗಂಡ ರಜೆಗೆಂದು ಮನೆಗೆ ಬಂದಿರುತ್ತಾರೆ. ಆಗ ದೇಶದಲ್ಲಿ ಕೋವಿಡ್ ಸಾಂಕ್ರಮಿಕ ರೋಗ ಹರಡಿತ್ತು. ದಿಃ23-04-2020 ರಂದು ನನ್ನ ಗಂಡ ತನ್ನ ದ್ವಿಚಕ್ರ ವಾಹನವನ್ನು ತೊಳೆಯುತ್ತಿದ್ದಾಗ ಪೊಲೀಸರು ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬಂದು ನನ್ನ ಗಂಡನಿಗೆ ಮಾಸ್ಕ ಧರಿಸದೆ ದ್ವಿಚಕ್ರ ವಾಹನವನ್ನು ಯಾಕೆ ತೊಳೆಯತ್ತಿದ್ದಿರಿ ಅಂತಾ ಕೇಳಿದರು. ಅದಕ್ಕೆ ನನ್ನ ಗಂಡ ಕ್ಷಮೆ ಕೇಳಿ ಒಳಗೆ ಹೋಗುತ್ತೇನೆ ಎಂದು ಹೇಳಿ ಒಳಗೆ ಹೋಗುವಾಗ ಒಬ್ಬ ಪೊಲೀಸ ನನ್ನ ಗಂಡನ ಶರ್ಟನ ಕಾಲರ ಹಿಡಿದು ಇನ್ನೊಬ್ಬ ಪೊಲೀಸ ಪ್ಯಾಟಿನ ಬೆಲ್ಟ ಹಿಡಿದರು. ಮುಂದೆ ನನ್ನ ಗಂಡನಿಗೆ ಅವಾಚ್ಯ ಶಬ್ದಗಳಿಂದ ಬೈದು ಲಾಠಿಯಿಂದ ಹಲ್ಲೆ ಮಾಡಿದರು. ನೀನು ಸೇನೆಯಲ್ಲಿ ಇದಿದ್ದಕ್ಕೆ ನಿನಗೆ ತುಂಬಾ ಸೊಕ್ಕು ಬಂದಿದೆ ಎಂದು ಹೇಳಿದರು. ಆಗ ನಾನು ಅವರ ಮಧ್ಯೆ ಹೋದಾಗ ನನಗೆ ನುಗ್ಗಿಸಿ ನನ್ನ ಗಂಡನಿಗೆ ಕರೆದುಕೊಂಡು ಹೋದರು.

2) ಸದಲಗಾ ಪೊಲೀಸ ಠಾಣೆಯಲ್ಲಿ 20 ಜನ ಪೊಲೀಸರು ಮತ್ತು ಒಬ್ಬರು ಮಹಿಳಾ ಪೊಲೀಸರು ಸೇರಿ ನನ್ನ ಗಂಡನಿಗೆ ಬೇಡಿ ಹಾಕಿ ಹಲ್ಲೆ ಮಾಡಿ ಕುಡಿಯಲು ನೀರು ಸಹ ಕೊಟ್ಟಿರುವುದಿಲ್ಲ. ನಾನು ನನ್ನ ಗಂಡನಿಗೆ ಬೇಟಿಯಾಗಲು ಹೋದರೆ ನನ್ನನ್ನು ಬೇಟಿಯಾಗಲು ಬಿಟ್ಟಿರುವುದಿಲ್ಲ. ಮುಂದೆ ನಿನ್ನ ಗಂಡನಿಗೆ ಸಂಜೆ ವೇಳೆ ಬಿಡುತ್ತೇವೆ ಎಂದು ಹೇಳಿ ನನಗೆ ಕಳುಹಿಸಿರುತ್ತಾರೆ. ನಂತರ ನನಗೂ ಮತ್ತು ನನ್ನ ಗಂಡನಿಗೆ ಪೊಲೀಸರು ಈ ರೀತಿ ಪುನಃ ಮಾಡಬೇಡಿ ಎಂದು ತಾಕಿತು ಮಾಡಿ ನಾವು ಯಾವುದೇ ಪ್ರಕರಣ ದಾಖಲೆ ಮಾಡಿರುವುದಿಲ್ಲ ನೀವು ಕೂಡಾ ಯಾವುದೇ ಪ್ರಕರಣವನ್ನು

ದಾಖಲು ಮಾಡಬೇಡಿ ಎಂದು ಹೇಳಿ ನಂತರ ನನ್ನ ಗಂಡನಿಗೆ ಜೈಲಿಗೆ ಕಳುಹಿಸಿರುತ್ತಾರೆ. 4–5 ದಿನಗಳ ನಂತರ ನನ್ನ ಗಂಡ ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದಿರುತ್ತಾರೆ.

3) 4 ವರ್ಷದ ನಂತರ ಈಗ ನನ್ನ ಗಂಡನ ವಿರುದ್ಧ ಪ್ರಕರಣ ಚಾಲತಿಯಲ್ಲಿ ಇರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ. ನನ್ನ ಗಂಡ ನ್ಯಾಯಾಲಯದಿಂದ ಜಾರಿಯಾಗಿರುವ ಸಮನ್ಸ ಬಗ್ಗೆ ಹೇಳಿದಾಗ ನನಗೆ ಪ್ರಕರಣ ಬಗ್ಗೆ ಗೊತ್ತಾಗಿರುತ್ತದೆ. ಆದ ಕಾರಣ ನಾನು ಸದಲಗಾ ಪೊಲೀಸ ಠಾಣೆ, ಚಿಕ್ಕೋಡಿ ಪೊಲೀಸ ಠಾಣೆ ಮತ್ತು ಎಲ್ಲಾ ಪೊಲೀಸ ಇಲಾಖೆಯ ಮೇಲಾಧಿಕಾರಿಗಳಿಗೆ ಸಾರಾಪೂರೆ ಮತ್ತು ಹುಣಶಾಳೆ ಹಾಗೂ ಇತರರ 4 ಜನ ಪೊಲೀಸರ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ. ಆದರೆ ಅವರ ವಿರುದ್ಧ ಯಾವುದೇ ಕ್ರಮವನ್ನು ಜರುಗಿಸಿರುವುದಿಲ್ಲ. ನಾನು ಹೇಳಿದ ಎಲ್ಲಾ ಘಟನೆಯು ದಿನ ಪತ್ರಿಕೆಯಲ್ಲಿ ಪ್ರಕಟವಾಗಿರುತ್ತದೆ. ಸದರಿ ಘಟನೆ ವೇಳೆ ಸುಮಾರು ಜನ ಅಲ್ಲಿ ಇದ್ದರು.

ಈ ಹಂತದಲ್ಲಿ ಮುಂದುವರೆದ ಹೇಳಿಕೆಗೆ ಕಾಲವಕಾಶ ಕೋರಿದ್ದು ನೀಡಲಾಯಿತು.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ

(ಸಾಕ್ಷಿ ಹಿಂದಿ ಭಾಷೆಯಲ್ಲಿ ನೀಡಿದ ಹೇಳಿಕೆಯನ್ನು ಕನ್ನಡ ಭಾಷೆಯಲ್ಲಿ ತರ್ಜುಮೆ ಮಾಡಿ ಹೇಳಿ, ಸಾಕ್ಷಿ ಹಿಂದಿ ಭಾಷೆಯಲ್ಲಿ ನೀಡಿದ ಉತ್ತರವನ್ನು ಯಥಾವತ್ತಾಗಿ ಕನ್ನಡ ಭಾಷೆಗೆ ತರ್ಜುಮೆ ಮಾಡಿರುವುದಾಗಿ ಈ ಮೂಲಕ ದೃಡಿಕರಿಸುತ್ತೇನೆ)

ಮಾನ್ಯ ತರ್ಜುಮೆದಾರರ ವಕೀಲರ ಸಹಿ